ಅಸಲು ದಾವೆ ಸಂಖ್ಯೆ - 303/2019
ಡಿ.ಡಬ್ಲ್ಯೂ - 03
ದಿನಾಂಕಃ 28-02-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ</u>**

ದಾವಾ ಆಸ್ತಿಯ ಸರ್ವೆ ನಂ. 79/2ಬ ಇರುತ್ತದೆ. ವಿಸ್ತೀರ್ಣ 3 ಎಕರೆ 35 ಗುಂಟೆ ಇರುತ್ತದೆ. ಸದರಿ ಆಸ್ತಿಯು ಈಗ ಮೃತ ರುದ್ರಗೌಡನ ಹೆಸರಿನಲ್ಲಿ ಇರುತ್ತದೆ. ಮೂಲ ಮರಿಯಪ್ಪ ದುರಗಪ್ಪ ಮಾದರ ರವರ ಹೆಸರಿನಲ್ಲಿತ್ತು. ಎಷ್ಟನೇ ಇಸವಿಯವರೆಗೂ ಮರಿಯಪ್ಪ ನವರ ಹೆಸರು ಇತ್ತು ಎಂದರೆ, 1963 ರ ತನಕ ಅವರ ಹೆಸರಿನಲ್ಲಿ ಇತ್ತು. 1967 ನೇ ಇಸವಿಯಲ್ಲಿ ಗದಿಗೆವ್ವ ಚಂದ್ರಗೌಡ ಪಾಟೀಲ ರವರ ಹೆಸರಿನಲ್ಲಿ ಪೋಕಲ್ ಎಂಟ್ರಿ ಮುಖಾಂತರ ದಾಖಲಾಗಿರುತ್ತದೆ. ಸದರಿ ಗದಿಗೆವ್ವ ಚಂದ್ರಗೌಡ ಪಾಟೀಲ ರವರು ತೀರಿಕೊಂಡ ನಂತರ 1983 ರಲ್ಲಿ ಅವರ ಮಕ್ಕಳ ಹೆಸರಿಗೆ ದಾಖಲಾಯಿತು. 1971 ರಲ್ಲಿ ಗದಿಗೆವ್ವ ರವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 1983 ರಲ್ಲಿ ಎಮ್ ಎ ನಂ. 2022 ರ ಪ್ರಕಾರ ಗದಿಗೆವ್ವ ರವರ ಮಕ್ಕಳಾದ ನರಸನಗೌಡ ಮತ್ತು ರುದ್ರಗೌಡ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ರುದ್ರಗೌಡ ಮತ್ತು ಅವನ ಹೆಂಡತಿ ನೀಲವ್ವ ಮರಣ ಹೊಂದಿರುತ್ತಾರೆ. ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ವಾದಿ ಮತ್ತು ಮೃತ ರುದ್ರಗೌಡ ಗದಿಗೆವ್ವನ ಮಕ್ಕಳು ಎಂದರೆ ಸರಿ. ರುದ್ರಗೌಡನ ಮತ್ತು ನರಸನಗೌಡನ ತಂದೆಯವರಾದ ಚಂದ್ರಗೌಡ ಪಾಟೀಲರವರು ಎಷ್ಟನೇ ಇಸವಿಯಿಂದ ಎಷ್ಟನೇ ಇಸವಿಯತನಕ ಊರಿನಲ್ಲಿ ಗೌಡಿಕೆ (ಪಂಚಾಯತಿದಾರರು) ಆಗಿದ್ದರು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗೆ ಚಂದ್ರಗೌಡ ಪಾಟೀಲನ ಹೆಸರು ದಾಖಲಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಗದಿಗೆವ್ವ ಹೆಸರು ನಂತರ ವಾದಿ ಮತ್ತು ಮೃತ ರುದ್ರಗೌಡನ ಹೆಸರು ದಾಖಲಾದ ನಂತರ ಅದನ್ನು ಪ್ರಶ್ನಿಸಿ ಯಾವುದೇ ದಾವೇ ಮಾಡಿರುವುದಿಲ್ಲ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ಸ್ವಲ್ಪ ಜಾಗವನ್ನು ಪ್ರತಿವಾದಿಯರು ಖರೀದಿ ಹಿಡಿದಿದ್ದು ಅದರ ಮೇಲೆ ದಾವೆ ಈ ನ್ಯಾಯಾಲಯದಲ್ಲಿ ಇತ್ತು ಎಂದರೆ ಯಾವುದೇ ಕೇಸ ಮಾಡಿರುವುದಿಲ್ಲ ಮತ್ತು ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮುಳಗುಂದ ರ ಆಸ್ತಿ ಎಂದರೆ ಸರಿ. ಪಶ್ಚಿಮಕ್ಕೆಃ ಸರ್ವೆ ನಂ. 79/1 ಎ ರ ಆಸ್ತಿ ಇದೆ ಎಂದರೆ ಸರಿ. ಉತ್ತರಕ್ಕೆಃ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆಃ ಪ್ರತಿವಾದಿಯರ ಜಮೀನು ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ

ಮತ್ತು ಪ್ರತಿವಾದಿಯರ ನಡುವೆ 01-10-2019 ರಂದು  ತಂಟೆ ತಕರಾರು ಆಗಿರುತ್ತದೆ ಎಂದರೆ ಸರಿ.

ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಮತ್ತು ಅದರಲ್ಲಿ ಸರ್ವೆ ನಂ. ಬರೆಸಿದ್ದೀರಾ ಎಂದರೆ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ ಮತ್ತು ಸರ್ವೆ ನಂಬರನ್ನು ಬರೆಸಿರುತ್ತೇನೆ. ಚಕ್ಕಬಂದಿಯನ್ನು ಸಹ ಬರೆಸಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ  ಮತ್ತು  ಚಕ್ಕಬಂದಿ ಬರೆಸಿದ್ದೀರಾ ಎಂದರೆ ಸಾಕ್ಷಿಯ ಸಾಕ್ಷ ಪ್ರಮಾಣ ಪತ್ರವನ್ನು ಪರಿಶೀಲಿಸಿ ಇಲ್ಲ ಎಂದು ನುಡಿಯುತ್ತಾರೆ. ಆದರೆ ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಗದಿಗೆವ್ವನ ಗಂಡನ ಹೆಸರು ಚಂದ್ರಗೌಡ ಪಾಟೀಲ ಎಂದರೆ ಸರಿ. ಚಂದ್ರಗೌಡ ಪಾಟೀಲನ ತಂದೆಯ ಹೆಸರು ಏನು ಎಂದರೆ ನರಸನಗೌಡ ಪಾಟೀಲ ಇರುತ್ತದೆ. ಅವರ ಬಿಟ್ಟು ಅವರ ಹಿರಿಯರ ಹೆಸರು ನನಗೆ  ಗೊತ್ತಿರುವುದಿಲ್ಲ.  ಈ ಹೆಸರುಗಳನ್ನು ಬಿಟ್ಟು ಬೇರೆ ಹೆಸರುಗಳನ್ನು ಏನಾದರು ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿರುವುದಿಲ್ಲ. ಚಂದ್ರಗೌಡ ಪಾಟೀಲ, ಗದಿಗೆವ್ವ, ನರಸನಗೌಡ ಮತ್ತು ರುದ್ರಗೌಡನ ಹೆಸರನ್ನು ಬಿಟ್ಟು ಬೇರೆ ಯಾವುದೇ ಹೆಸರನ್ನು ನೀವು ಬರೆಸಿರುವುದಿಲ್ಲ ಎಂದರೆ ಗದಿಗೆವ್ವ ರವರ ಸಹೋದರನಾದ ಗುರುಸಿದ್ಧಗೌಡ  ರವರ ಹೆಸರನ್ನು ಬರೆಸಿದ್ದೇನೆ. ಅವರು ಊರಿನ ಗೌಡಿಕೆ ಮಾಡುತ್ತಿದ್ದರು ಮತ್ತು ಮರಿಯಪ್ಪನವರು ಗುರುಸಿದ್ದಗೌಡನ ಮನೆಯಲ್ಲಿ ಜೀತ ಮಾಡುತ್ತಿದ್ದರು.

ಸದರಿ ಗುರುಸಿದ್ಧಗೌಡನು ಚಂದ್ರಗೌಡ ಪಾಟೀಲ ಮತುತ ಗದಿಗೆವ್ವ ನ ಕುಟುಂಬಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ಎಷ್ಟನೇ ಇಸವಿಯಲ್ಲಿ ಮರಿಯಪ್ಪನವರು ಗುರುಸಿದ್ಧಗೌಡನ ಮನೆಯಲ್ಲಿ ಜೀತ ಮಾಡುತ್ತಿದ್ದರು ಎಂದರೆ ಸುಮಾರು 1956 ರಿಂದ 10 ವರ್ಷ ಅಲ್ಲಿಯೇ ಜೀತ ಮಾಡತ್ತಿದ್ದರು. 1956 ಎಂದರೆ ಆಗ ನಿಮಗೆ 2 ವರ್ಷ ಆಗಿತ್ತು ಎಂದರೆ ಸರಿ. ಸದರಿ ವಿಷಯವನ್ನು ನಾನು ನನ್ನ ತಂದೆಯ ಮುಖಾಂತರ ತಿಳಿದುಕೊಂಡಿರುತ್ತೇನೆ.

ಪ್ರತಿವಾದಿಯರು ಗುರುಸಿದ್ಧಗೌಡನ ಮನೆಯಲ್ಲಿ ಜೀತ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ರುದ್ರಗೌಡನ ಮರಣದ  ನಂತರ ಇಂದಿನವರೆಗೂ ವಾದಿಯರು ದಾವಾ ಆಸ್ತಿಯ ಖಬ್ಜಾ ವಹಿವಾಟಿನಲ್ಲಿ ಇರುತ್ತಾರೆ  ಎಂದರೆ ಸರಿಯಲ್ಲ. ದಾವಾ ಆಸ್ತಿಗೆ  ಪ್ರತಿವಾದಿಯರ ಹೆಸರು ಪೋಕಲ್ ಎಂಟ್ರಿ ಮುಖಾಂತರ ಆಗಿರುತ್ತದೆ ಎಂದು

ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಹೊಂದಿಕೊಂಡು ನಿಮ್ಮ ಆಸ್ತಿ ಇಲ್ಲ ಎಂದರೆ ಸರಿ. ಪ್ರತಿವಾದಿಯರು ನಮ್ಮ ಜಾತಿಯವರು. ಈ ಉದ್ದೇಶಕ್ಕಾಗಿ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ಮಾಲೀಕರು ಅಲ್ಲಾ, ಖಬ್ಜಾದಾರರು ಅಲ್ಲಾ ಎಂದರೆ ಸರಿಯಲ್ಲ. ವಾದಿಯರೇ ದಾವಾ ಆಸ್ತಿಯ ಮಾಲೀಕರು ಮತುತ ಖಬ್ಜಾದರರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.